# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೂಡಿ ಉಪವಿಭಾಗ, ಬೆಂಗಳೂರು-48.

ದಿನಾಂಕ:16-01-2021

## ವಾರ್ಡ್-85ರ ವಾರ್ಡ್ ಸಮಿತಿ ಸಭೆ

## *ಸಭೆಯ ನಡವಳಿಗಳು*

**ವಿಷಯ:-** ಮಾನ್ಯ ಆಯುಕ್ತರು ಬಿಬಿಎಂಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/ 2020-21 ದಿನಾಂಕ:21-09-2020 ರವರ ಆದೇಶದಂತೆ ದಿನಾಂಕ:16-01-2021 ರಂದು ವಾರ್ಡ್ ನಂ.85 ರ ಎ.ಇ.ಸಿ.ಎಸ್ ಬಡಾವಣೆ, ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

<u>ಸಭೆಗೆ ಹಾಜರಾಗಿದ್ದವರ ವಿವರಗಳು:</u>

| ಕ್ರ ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1 | ಶ್ರೀ.ಡಾ॥ಸುರೇಶ್ | ನೋಡಲ್ ಅಧಿಕಾರಿ ಹಾಗೂ ಅಧ್ಯಕ್ಷರು |
| 2 | ಶ್ರೀ.ರಾಚಿಪ | ಕಾರ್ಯದರ್ಶಿ |
| 3 | ಶ್ರೀ ದೇವರಾಜ | ಹಿರಿಯ ಆರೋಗ್ಯ ಪರಿವೀಕ್ಷಕರು |
| 4 | ಶ್ರೀ.ರಘನಂದನ್ | ಕಿರಿಯ ಆರೋಗ್ಯ ಪರಿವೀಕ್ಷಕರು |
| 5 | ಶ್ರೀ ಆರ್ ಚಂದ್ರಶೇಖರ್ | ಕೆಲಸ ಪರಿವಿಕ್ಷಕರು |
| 6 | ಶ್ರೀ.ವಿ.ರವಿಚಂದ್ರ | ಸಹಾಯಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ |
| 7 | ಶ್ರೀ.ರವೀಂದ್ರ | BWSSB |
| 8 | ಶ್ರೀ.ಜಗದೀಶ್ | ಬಿಬಿಎಂಪಿ, ವಿದ್ಯುತ್ ಶಾಖೆ |
| 9 | ಶ್ರೀ.ಎಂ.ಚಂದ್ರಾರೆಡ್ಡಿ | ಕುಂದಲಹಳ್ಳಿ ಕಾಲೋನಿ |

ಶ್ರೀ.ಡಾ॥ಸುರೇಶ್.ಆರ್., ನೋಡಲ್ ಅಧಿಕಾರಿ ಹಾಗೂ ಅಧ್ಯಕ್ಷಕರು ಸಭೆಯಲ್ಲಿ ಹಾಜರಿದ್ದ ಶ್ರೀ.ದೇವರಾಜ್ ಎಂ, ಹಿರಿಯ ಆರೋಗ್ಯ ಪರಿವೀಕ್ಷಕರು ರವರು ಹಾಗೂ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿರವರುಗಳಿಗೆ ಹಾಗೂ ಸಂಘಸಂಸ್ಥೆಯ ಮುಖ್ಯಸ್ಥರಿಗೆ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

1. ಸಭೆಯಲ್ಲಿ ದಿನಾಂಕ:02-01-2021 ರಂದು ನಡೆದ ನಡುವಳಿಗಳನ್ನು ಅಧ್ಯಕ್ಷಕರು ಹಾಗೂ ನೋಡಲ್ ಅಧಿಕಾರಿ ಡಾ॥ಸುರೇಶ್ ರವರು ವಿವರಿಸಿದರು.

Scanned with CamScanner

2. ಸಭೆಯಲ್ಲಿ ಶ್ರೀ.ಚಂದ್ರಾರೆಡ್ಡಿ, ಕುಂದಲಹಳ್ಳಿ ಕಾಲೋನಿ ರವರು 11ನೇ ಕ್ರಾಸ್, ಕುಂದಲಹಳ್ಳಿಯಲ್ಲಿ ಚರಂಡಿ ಹೂಳು ತೆಗೆದಿರುವುದಿಲ್ಲವೆಂದು ಸಭೆಯಲ್ಲಿ ತಿಳಿಸಿದರು. ಸದರಿ ವಿಚಾರವಾಗಿ ಶ್ರೀ.ರಾಚಿಪ, ಸ.ಅ ವಾರ್ಡ್ ನಂ.85 ರವರು ಚರಂಡಿ ಹೂಳು ತೆಗೆಯುವ ಕಾಮಗಾರಿಯು ಈಗಾಗಲೇ ಪ್ರಗತಿಯಲ್ಲಿದ್ದು, ಶೀಘ್ರದಲ್ಲೇ 11ನೇ ಕ್ರಾಸ್, ಕುಂದಲಹಳ್ಳಿಯಲ್ಲಿ ಚರಂಡಿ ಹೂಳು ತೆಗೆಯಲಾಗುವುದು ಎಂದು ಸಭೆಯಲ್ಲಿ ತಿಳಿಸಿದರು.

3. ಸಭೆಯಲ್ಲಿ ಶ್ರೀ.ಚಂದ್ರಾರೆಡ್ಡಿ, ಕುಂದಲಹಳ್ಳಿ ಕಾಲೋನಿ ರವರು 1ನೇ ಕ್ರಾಸ್ ಮತ್ತು 2ನೇ ಕ್ರಾಸ್‌ನಲ್ಲಿ ರಸ್ತೆಯ ಕೊನೆ ಭಾಗದಲ್ಲಿ ಚರಂಡಿ ಇರುವುದಿಲ್ಲ ಎಂದು ತಿಳಿಸಿದರು. ಸದರಿ ವಿಚಾರವಾಗಿ ಶ್ರೀ.ರಾಚಿಪ, ಸ.ಅ ವಾರ್ಡ್ ನಂ.85 ರವರು ಕಾಮಗಾರಿಯು ಈಗಾಗಲೇ ಪ್ರಗತಿಯಲ್ಲಿರುವ ಅಂದಾಜು ಪಟ್ಟಿಯಲ್ಲಿ 1ನೇ ಕ್ರಾಸ್ ಮತ್ತು 2ನೇ ಕ್ರಾಸ್‌ನ ಕೊನೆ ಭಾಗದಲ್ಲಿ ಚರಂಡಿ ನಿರ್ಮಿಸಲು ಅಂದಾಜು ಪಟ್ಟಿಯಲ್ಲಿ ನಮೂದಾಗಿರುತ್ತದೆ ಎಂದು ತಿಳಿಸಿದರು.

4. ಸಭೆಯಲ್ಲಿ ಶ್ರೀ.ಚಂದ್ರಾರೆಡ್ಡಿ, ಕುಂದಲಹಳ್ಳಿ ಕಾಲೋನಿ ರವರು 6ನೇ ಕ್ರಾಸ್, ಕುಂದಲಹಳ್ಳಿಯಲ್ಲಿ ಯು.ಜಿ.ಡಿ ಪೈಪ್‌ಲೈನ್‌ನ್ನು ಬದಲಾಯಿಸಲು ಕೋರಿರುತ್ತಾರೆ. ಸದರಿ ವಿಚಾರವಾಗಿ ಶ್ರೀ.ರವೀಂದ್ರ, BWSSB ರವರು ಯು.ಜಿ.ಡಿ ಪೈಪ್‌ಲೈನ್‌ನ್ನು ಬದಲಾಯಿಸುವುದಾಗಿ ಒಪ್ಪಿ ಸಭೆಯಲ್ಲಿ ತಿಳಿಸಿದರು.

5. ಹಿಂದಿನ ಸಭೆಯಲ್ಲಿ ಶ್ರೀ.ಸುರೇಶ್ ಅಧ್ಯಕ್ಷಕರು ರವರು ವಾರ್ಡ್ ವ್ಯಾಪ್ತಿಯಲ್ಲಿ ವಿದ್ಯುತ್ ದೀಪಗಳನ್ನು ತ್ವರಿತ ಗತಿಯಲ್ಲಿ ದುರಸ್ಥಿಗೊಳಿಸಲು ಸಭೆಯಲ್ಲಿ ತಿಳಿಸಿದ್ದರು. ಸದರಿ ವಿಷಯಕ್ಕೆ ಸಂಬಂದಿಸಿದಂತೆ ಶ್ರೀ ಜಗದೀಶ್ ರವರು ಮತ್ತು ಬೀದಿ ದೀಪಗಳ ಗುತ್ತಿಗೆದಾರರು ವಿದ್ಯುತ್ ದೀಪಗಳನ್ನು ನಿರ್ವಹಣೆಯಲ್ಲಿ ಸಮರ್ಪವಾಗಿ ನಿರ್ವಹಿಸುತ್ತಿದ್ದಾರೆಂದು ಅಭಿನಂದನೆಗಳನ್ನು ಶ್ರೀ.ಸುರೇಶ್ ಅಧ್ಯಕ್ಷಕರು ರವರು ಸಭೆಯ ಮೂಲಕ ತಿಳಿಸಿರುತ್ತಾರೆ.

6. ಶ್ರೀ ಸುರೇಶ್ ಅಧ್ಯಕ್ಷಕರು, ರಘುನಂದನ್ ಕಿರಿಯ ಆರೋಗ್ಯ ಪರಿವೀಕ್ಷಕರು ರವರಿಗೆ ವಾರ್ಡ್ ವ್ಯಾಪ್ತಿಯ ಬಡಾವಣೆಯ ರಸ್ತೆಗಳನ್ನು ಸ್ವಚ್ಚವಾಗಿಡಲು ಪ್ರತಿದಿನ ಗುಡಿಸುವಂತೆ ತಿಳಿಸಿದರು. ಸದರಿ ವಿಷಯಕ್ಕೆ ರಘುನಂದನ್ ಕಿರಿಯ ಆರೋಗ್ಯ ಪರಿವೀಕ್ಷಕರು ರವರು ನಿರ್ವಹಿಸುವುದಾಗಿ ಒಪ್ಪಿಕೊಂಡರು.

7. ಶ್ರೀ ಸುರೇಶ್ ಅಧ್ಯಕ್ಷಕರು ರವರು ವಾರ್ಡ್ ವ್ಯಾಪ್ತಿಯಲ್ಲಿ ಬರುವ ಕಾಮಗಾರಿಗಳನ್ನು ತ್ವರಿತ ಗತಿಯಲ್ಲಿ ಪೂರ್ಣಗೊಳಿಸಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ನಿರ್ವಹಿಸಲು ಸೂಚಿಸಿದರು.

8. ಶ್ರೀ ಸುರೇಶ್ ಅಧ್ಯಕ್ಷಕರು ರವರು ಶ್ರೀಮತಿ ಪ್ರಮೀಳಾ ಪ್ರಥಮ ಆರೋಗ್ಯ ಅಧೀಕಾರಿಗೆ ದೂರವಾಣಿ ಮುಖಾಂತರ ಪ್ರಸ್ತುತಾ ನಡೆಯುತ್ತಿರುವ ಆರ್‌ಟಿಪಿಸಿಆರ್ ಟೇಷ್ಟಿಂಗನ್ನು ದಿನವಹಿ ಹೆಚ್ಚಿಸುವಂತೆ ಸೂಚಿಸಿದರು.

9. ಸಭೆಯಲ್ಲಿ ಇತರ ಇಲಾಖೆಯವರಾದ ಬೆಸ್ಕಾಂ, ಪೋಲಿಸ್ ರವರಿಗೆ ಮುಂದಿನ ಸಭೆಗೆ ಹಾಜರಾಗಲು ಶ್ರೀ ಸುರೇಶ್ ಅಧ್ಯಕ್ಷಕರು ಸೂಚಿಸಿದರು.

10. ಈ ಮೇಲ್ಕಂಡ ಅಂಶಗಳನ್ನು ಆದ್ಯತೆ ಮೇರೆಗೆ ನಿರ್ವಹಿಸಲು ಅಧ್ಯಕ್ಷರು ಸೂಚಿಸಿದರು ಹಾಗೂ ಸಭೆಯನ್ನು ಮುಕ್ತಾಯಗೊಳಿಸಿದರು.

C. Reddy

ಕಾರ್ಯದರ್ಶಿ

ವಾರ್ಡ್ ನಂ.85

ನೋಡಲ್ ಅಧಿಕಾರಿ ಹಾಗೂ

ವಾರ್ಡ್ ಕಮಿಟಿ ಅಧ್ಯಕ್ಷರು

ವಾರ್ಡ್ ನಂ.85

Scanned with CamScanner